'ಹಿರ್ಯಾರ ಇದು ಲೈಬ್ರರಿ ಐತಿ. ಈಗ ಸುಮ್ನೆ ಕುಂಡ್ರಿ...' ಒಂದಿಷ್ಟು ಗಡುಸಾಗಿಯೇ ಹೇಳಿದರು. ಆ ವ್ಯಕ್ತಿಯು 'ಏನ್ರೀ ನನ್ನ ಹೊಸ ಜೋಡು ಹೊಸದು ಇದ್ದಾವ. ತಗೊಂಡು ಇನಾ ಎಂಟ ದಿನಾ ಆಗಿಲ್ಲ, ಅದಕ್ಕs ನನಗ ಸಂಕಟ ಆಗಾಕತ್ತೈತಿ... ಸುಮ್ನೆ ಕುಂಡ್ರಂತ ನನಗs ಹೇಳ್ತಿರೆಲ್ಲ ನೀವೂ?' ಎಂದು ವ್ಯಗ್ರವಾಗಿ ನುಡಿದರು. 'ಅಲ್ರೀ... ನಿಮ್ಮ ಚಪ್ಲಿ ಬದ್ಲಿ ಆದ್ರ ನಾನೇನ್ಮಾಡ್ಲಿ? ಯಾರೊ ಮರೆತು ಹಾಕೊಂಡು ಹೋಗಿರ್ಬೇಕು. ಅವ್ರ ಹಳೆ ಚಪ್ಲಿ ನೀವು ಇಂದ ಇಲ್ಲೇ ಬಿಟ್ಟ ಹೋಗ್ರಿ, ಅವ್ರು ಬಂದ್ರs ನಿಮ್ಮದು ಬಿಟ್ಟು ಅವ್ರುದು ತಗೊಂಡ ಹೋಗ್ತಾರ' ಎಂದು ಕಲ್ಲೇಶಿ ಕಡ್ಡಿ ಮುರಿದಂತೆ ಖಡಕ್ ಆಗಿ ಹೇಳಿದರು. ಆಗ ಆ ಆಸಾಮಿ 'ಅವರ್ಯಾಕ್ ಬರ್ತಾರ್ರೀ, ನನ್ನದು ಹೊಸ ಚಪ್ಲಿ ಇದ್ವು. ಈ ಹರಕು ಚಪ್ಲಿ ಒಯ್ಲಾಕ್ ಅವರ್ಯಾಕ್ ಬರ್ತಾರ್ರೀ?' ಎಂದು ತನ್ನ ಸಂಕಟವನ್ನೆಲ್ಲ ಕಾರಿಕೊಂಡಾಗ 'ನನ್ನ ಲೈಬ್ರರಿ ಡ್ಯೂಟಿ ಬಿಟ್ಟು, ನಿಮ್ಮ ಚಪ್ಲಿ ನಾನು ನೋಡಿಕೊಂತ ಕುಂಡ್ರಬೇಕೇನ್ರೀ ಹಿರ್ಯಾರಾಗಿ ಹಿಂಗ್ಯಾಕ್ ಮಾತಾಡ್ಲಿಕತ್ತೀರಿ ನೀವು?' ಕಲ್ಲೇಶಿ ಆಕ್ರೋಶಗೊಂಡು ಹೇಳಿದಾಗ, ಜೋಡು ಕಳೆದುಕೊಂಡ ಆ ಹಿರಿಯರು ಜಾಗ ಖಾಲಿ ಮಾಡಿದ್ದರು.

ಮರದಿಂದ ತಯಾರಿಸಲಾದ ಪಾದರಕ್ಷೆಗಳನ್ನು ಪಾದುಕೆಗಳೆಂದು ಕರೆಯುತ್ತಾರೆ. ನಮ್ಮ ಕೆಲವು ಸ್ವಾಮಿಗಳು ಇಂಥ ಪಾದುಕೆಗಳನ್ನು ಬಳಸುವುದುಂಟು. ನಮ್ಮ ರಾಮಾಯಣದಲ್ಲಿ ಇರುವಂತೆ, ರಾಮನು ವನವಾಸಕ್ಕೆ ತೆರಳುವಾಗ, ರಾಮನ ಮೇಲಿನ ಅತಿಯಾದ ಪ್ರೀತಿ ಹಾಗೂ ಭಕ್ತಿಯಿಂದ ಶ್ರೀರಾಮನ ಪಾದುಕೆಗಳನ್ನು ರಾಜಪೀಠದಲ್ಲಿಟ್ಟು ಆಡಳಿತ ನಡೆಸಿದ ಭರತನ ಸಹೋದರ ಪ್ರೇಮವನ್ನು ಎಷ್ಟು ಕೊಂಡಾಡಿದರೂ ಸಾಲದು. ರಾಜಪೀಠದ ವೈಭವ ಪಡೆದ ಶ್ರೀರಾಮನ ಪಾದುಕೆಗಳ ಹಿರಿಮೆ ಅದ್ಭುತವಲ್ಲವೆ!?

ಮಚ್ಚೆ ಅಥವಾ ಜೋಡುಗಳು ಒಮ್ಮೊಮ್ಮೆ ಕಳ್ಳರು, ದರೋಡೆಕೋರರನ್ನು ಪತ್ತೆಹಚ್ಚುವಲ್ಲಿ ನೆರವಾಗುತ್ತವೆ. ದರೋಡೆ ಮಾಡಿದ ವ್ಯಕ್ತಿ ಅಥವಾ ಅಪರಾಧಿಗಳು ತಮ್ಮನ್ನು ಹಿಡಿಯಲು ಬಂದವರಿಂದ ತಪ್ಪಿಸಿಕೊಳ್ಳುವ ಭರದಲ್ಲಿ ಕಾಲಲ್ಲಿಯ ಜೋಡುಗಳು ಹರಿದು ಹೋಗಿಯೋ, ಕಾಲಿನಿಂದ ಉಚ್ಚಿಬಿದ್ದು, ಅವನ್ನು ಪುನಃ ತೆಗೆದುಕೊಳ್ಳಲು ಸಾಧ್ಯವಾಗದೇ ಜೀವಭಯದಿಂದ ಓಡಿಹೋಗಿ ತಪ್ಪಿಸಿಕೊಳ್ಳುತ್ತಾರೆ. ಇಂಥ ಸಂದರ್ಭದಲ್ಲಿ ಪೊಲೀಸರಿಗೆ ಈ ಜೋಡುಗಳು ಸಿಕ್ಕರೆ, ಅವುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಿ ತಜ್ಞರಿಂದ ಪರೀಕ್ಷಿಸುತ್ತಾರೆ. ಆ ಜೋಡು ಧರಿಸಿದ ಅಪರಾಧಿಯನ್ನು ಬಂಧಿಸಲು ನೆರವಾದರೆ ಮರು ದಿನ ಪತ್ರಿಕೆಯ ಮುಖಪುಟದಲ್ಲಿ 'ಚಪ್ಪಲಿಯಿಂದ ಕಳ್ಳರ ಪತ್ತೆ' ಎಂಬ ತಲೆಬರಹ ಪ್ರಕಟವಾಗಬಹುದು.

ಜೋಡುಗಳನ್ನು ಹಾಕಿಕೊಂಡು ನಡೆಯುವಾಗ ಅದರ ಉಂಗುಟ, ಬಾರಗಳು ಹರಿದು ನಡೆದಾಡಲು ಸಾಧ್ಯವಾಗದಿದ್ದಾಗ ಅವುಗಳನ್ನು ಅಲ್ಲಿಯೇ ಒಗೆದು ಬೇರೆ ಹೊಸ ಚಪ್ಪಲಿಗಳನ್ನು ಖರೀದಿಸಿ ಮುನ್ನಡೆಯುವವರು ಕೆಲವರಿರುತ್ತಾರೆ. ಇನ್ನು ಕೆಲವರು ಹೀಗೆ ಹರಿದ ಚಪ್ಪಲಿಗಳನ್ನು ಹಾಗೂ ಹೀಗೂ ಎಳೆದುಕೊಂಡು ಹೋಗಿ ಇವುಗಳ ಡಾಕ್ಟರ ಬಳಿಗೆ ಒಯ್ದು ಶಸ್ತ್ರಚಿಕಿತ್ಸೆ ಮಾಡಿಸಿ ಸುಧಾರಿಸಿಕೊಂಡು ಮತ್ತೆ ಉಪಯೋಗಿಸುತ್ತಾರೆ. ಕೆಲವೊಂದಿಷ್ಟು ಗಂಡಸರಿಗೆ ಅವರ ಹೆಂಡತಿಯರ ಹರಿದ ಚಪ್ಪಲಿಗಳನ್ನು ರಿಪೇರಿ ಮಾಡಿಸಿಕೊಂಡು ಬರುವ ಘನಕಾರ್ಯವನ್ನು ವಹಿಸಲಾಗುತ್ತದೆ. ಆಗ ಆ ಬಡಪಾಯಿ ಗಂಡನು ಹರಿದ ಚಪ್ಪಲಿಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ, ನಾಜೂಕಾಗಿ ಯಾರಿಗೂ ಗೊತ್ತಾಗದ ಹಾಗೆ ಒಯ್ದು ಶಸ್ತ್ರಚಿಕಿತ್ಸೆಗೆ ಒಳಪಡಿಸಿ ಮತ್ತೆ ತಂದು ಕೊಟ್ಟಾಗಲೇ ಅವರ ನಿಯತ್ತಿನ ಕೆಲಸಕ್ಕೆ ಬೆಲೆ ಬರುತ್ತದೆ. ಜೋಡುಗಳು ಜಗಳದ ಸಂದರ್ಭದಲ್ಲಿ ಆಯುಧಗಳಾಗಿಯೂ ಪರಿವರ್ತನೆಯಾಗುತ್ತವೆ. ಸಿಟ್ಟಿನ ಭರದಲ್ಲಿ ಒಬ್ಬರು